ಕರ್ನಾಟಕ ವಿಧಾನಸಭೆ

ಸೋಮವಾರ 23ನೇ ಜುಲೈ 2001ರಂದು ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ50 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ವಿರೋಧ ಪಕ್ಷದವರಿಂದ ಧರಣಿ

(ಅ) ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದು.

(ಸದನ ಸಮಾವೇಶಗೊಂಡಾಗ ವಿರೋಧ ಪಕ್ಷಗಳಾದ ಭಾರತೀಯ ಜನತಾಪಕ್ಷ, ಜನತಾದಳ (ಎಸ್), ಜನತಾದಳ (ಯು) ಪಕ್ಷಗಳ ಸದಸ್ಯರುಗಳು ಸಭಾಧ್ಯಕ್ಷರ ಪೀಠದ ಮುಂಭಾಗದ ಅವರಣದಲ್ಲಿ ಧರಣಿ ಕುಳಿತಿದ್ದರು)

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಸನ್ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ನಾವು ಈ ರಾಜ್ಯದಲ್ಲಿ ತಲೆದೋರಿರತಕ್ಕಂಥ ಭೀಕರ ಬರಗಾಲ ಮತ್ತು ಅದಕ್ಕೆ ಸಂಬಂಧಪಟ್ಟಂತೆ ರೈತರು ಅನುಭವಿಸಿದಂಥ ಪರಿಸ್ಥಿತಿ, ಅವರ ಕಷ್ಟನಷ್ಟಗಳು ಮತ್ತು ಇವತ್ತು ಸಾಲವನ್ನು ಮರುಪಾವತಿ ಮಾಡತಕ್ಕಂಥ ಪರಿಸ್ಥಿತಿ, ಬಡ್ಡಿಯನ್ನು ಮರುಪಾವತಿ ಮಾಡುವಂಥ ಪರಿಸ್ಥಿತಿ ರೈತರಿಗೆ ಉದ್ಭವವಾಗಿರುವುದರಿಂದ ಇದರ ಬಗ್ಗೆ ಇವತ್ತು ಬಡ್ಡಿ ಮನ್ನಾಮಾಡಬೇಕು ಎನ್ನುವಂಥಾದ್ದು ಮತ್ತು ಅಲ್ಪಕಾಲಾವಧಿ ಸಾಲವನ್ನು ದೀರ್ಘ ಕಾಲಾವಧಿ ಸಾಲವನ್ನಾಗಿ ಮಾರ್ಪಾಟು ಮಾಡಬೇಕು ಎನ್ನುವಂಥಾದ್ದು ಮತ್ತು ಸಾಲ ವಸೂಲಾತಿಯನ್ನು ನಿಲ್ಲಿಸಬೇಕು ಎನ್ನುವಂಥಾದ್ದು- ಈ ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಮಾತನಾಡಿದ್ದೇವೆ. ಜೊತೆಗೆ ಇವತ್ತು ಪಂಪುಸೆಟ್ಟುಗಳಿಗೆ ವಿದ್ಯುತ್ತಾ ಸಂಪರ್ಕವನ್ನು ಕಡಿತ ಮಾಡುವಂಥಾದ್ದನ್ನು ತೀವ್ರಗತಿಯಿಂದ ಮಾಡುವುದು ನಡೆದಿದೆ. ಹದಿನೈದು ಸಾವಿರ-ಇಪ್ಪತ್ತು ಸಾವಿರ ರೂಪಾಯಿಗಳಷ್ಟು ದಂಡ ಇದೆ, ಇಷ್ಟೊಂದು ಬಾಕಿ ಇದೆ ಅದನ್ನು ತುಂಬಬೇಕೆಂದು ಹೇಳಿ ಮನೆಮನೆಗೆ ಹೋಗಿ ಇವತ್ತು ರೈತರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಈ ರೀತಿ ಇರುವಂಥ ಪರಿಸ್ಥಿತಿಯಲ್ಲಿ ಒಂದುಕಡೆ ವಿದ್ಯುತ್ ಕಡಿತ ಇರುವಂಥಾದ್ದು, ಈ ಕಡೆ ಸಾಲ ವಸೂಲಾತಿಯ ಜೋರು ನಡೆದಿರುವಂಥಾದ್ದು- ಇದೆಲ್ಲಾ ನಡೆದಂಥ ಸಂದರ್ಭದಲ್ಲಿ, ನಾನು ಕಳೆದ ಎರಡು ದಿವಸಗಳಲ್ಲಿ ಅಂದರೆ ಶನಿವಾರ ಮತ್ತು ಭಾನುವಾರ ಕೆಲವೊಂದು ತಾಲ್ಲೂಕುಗಳಿಗೆ ಹೋದಂಥ ಸಂದರ್ಭದಲ್ಲಿ ರೈತರು ಯಾವ ಪರಿಸ್ಥಿತಿಯಲ್ಲಿದ್ದಾರೆ ಎಂಬುದನ್ನು ನೋಡಿದ್ದೇನೆ; ಮೊನ್ನೆ ಮಂತ್ರಿಗಳಾದ ಮಾನ್ಯ ಡಿ.ಕೆ. ಶಿವಕುಮಾರ್ ಅವರು ಸಾಲದ ವಸೂಲಾತಿ

70 ಪರ್ಸೆಂಟ್ ಆಗಿದೆಯೆಂದು ಹೇಳಿದರು. ಆದರೆ 70 ಪರ್ಸೆಂಟ್ ಅಲ್ಲ, 20-25 ಪರ್ಸೆಂಟ್ ಸಹಿತ ವಸೂಲಾತಿ ಆಗಿಲ್ಲ. ಕೇವಲ ಬುಕ್ ಅಡ್ಜಸ್ಟ್‌ಮೆಂಟ್ ಮಾಡುತ್ತಿದ್ದಾರೆ. ಕಳೆದ ಐದಾರು ವರ್ಷಗಳಿಂದ ಸಾಲಕ್ಕೆ ಬಡ್ಡಿ, ಚಕ್ರಬಡ್ಡಿ ಸೇರಿಸಿ ಸಾಲ ನಾಲ್ಕು ಸಾವಿರ ಇದ್ದಾಗ ನಲವತ್ತು ಸಾವಿರ ಆಸಲು ತುಂಬುವಂಥ ಪರಿಸ್ಥಿತಿ ಇದೆ. ನಾಲ್ಕು ಸಾವಿರ ಸಾಲವಾಗಿ ಇರುವಂಥಾದ್ದು ಬೆಳೆದು ಈ ನಲವತ್ತು ಸಾವಿರ ಆಸಲು ತುಂಬುವಂಥಾದ್ದು ಪರಿಸ್ಥಿತಿ ಇದೆ. ಆದರಮೇಲೆ ಚಾಲ್ತಿ ಬಡ್ಡಿ ಬೇರೆ ಇರುತ್ತದೆ. ಈ ರೀತಿಯಾಗಿ ಸರಳಬಡ್ಡಿ, ಚಕ್ರಬಡ್ಡಿ ಎಲ್ಲಾ ಸೇರಿ ಹೆಚ್ಚುಪಾಲು ಆಸಲನ್ನು ತುಂಬುವಂಥ ಪರಿಸ್ಥಿತಿ ರೈತರಿಗೆ ಬಂದಿದೆ. ಇದನ್ನೆಲ್ಲಾ ಸರ್ಕಾರಕ್ಕೆ ಬೇಕಾದಷ್ಟು ಮನವರಿಕೆ ಮಾಡಿದರೂ ಕೂಡ ಸರ್ಕಾರಕ್ಕೆ ಇವತ್ತು ಜ್ಞಾನೋದಯ ಆಗಿಲ್ಲ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಇವತ್ತು ಈ ಭೂಕಂದಾಯ ವಸೂಲಾತಿ ಎಂದು ಹೇಳಿ ಬಡ್ಡಿ ಮತ್ತು ಸಾಲ ವಸೂಲಾತಿಯಲ್ಲಿ ಜಂಗಮಾಲ್ ಜಪ್ತಿ ನಡೆದಿದೆ ಮತ್ತು ರೈತರು ಜೈಲಿಗೆ ಹೋಗುವಂಥಾದ್ದು ನಡೆಯುತ್ತಿದೆ. ನಮ್ಮ ಭಾಗದ ನವಲಗುಂದ ಮತ್ತು ನರಗುಂದ ತಾಲ್ಲೂಕುಗಳಲ್ಲಿ ನಿನ್ನೆ ನಾನು ಹೋಗಿದ್ದಂಥ ಸಂದರ್ಭದಲ್ಲಿ 30-40 ಜನ ರೈತರು ಜೈಲಿನಲ್ಲಿದ್ದಾರೆ ಮತ್ತು ವಸೂಲಾತಿ ಜೋರಾಗಿ ನಡೆಯುತ್ತಿದೆ. ತಮಗೆ ಒಂದೆರಡು ಉದಾಹರಣೆಗಳನ್ನು ನೀಡಬೇಕೆಂದರೆ, ಇದು ಪರಿಸ್ಥಿತಿ ಎಲ್ಲಿಯವರೆಗೆ ಹೋಗಿದೆಯೆಂದರೆ ರೈತರು ತಮ್ಮ ಜಮೀನಿನ ಮಾಲಕೀಹಕ್ಕನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ಬಂದಿದೆ. ಇವತ್ತು ಸಾಲ ತುಂಬಿಲ್ಲವೆಂದು ಹೇಳಿ ಭೂಕಂದಾಯ ಕಾನೂನು ಪ್ರಕಾರ ಕ್ರಮವನ್ನು ಜರುಗಿಸಿ ರೈತರ ಜಮೀನನ್ನು ಮುಟ್ಟುಗೋಲು ಹಾಕಿ ಲೀಲಾವು ತೆಗೆಯುವುದು ಬೇರೆ. ಆದರೆ ಇವತ್ತು ರೈತರ ಹೆಸರನ್ನೇ ಕಡಿಮೆಮಾಡಿ ಆ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಎಂದು ಎಂಟ್ರಿ ಮಾಡಿದ್ದಾರೆ. ಇದರಷ್ಟು ಘೋರವಾದ ಕೆಲಸ ಮತ್ತೊಂದು ಯಾವುದೂ ಇಲ್ಲ. ರೈತರ ಜಮೀನಿಗೆ ಇದ್ದಂಥ ಅವರ ಹೆಸರಿನ ಮಾಲಕೀಹಕ್ಕನ್ನು ಕಡಿಮೆಮಾಡಿ ಇವತ್ತು ಕರ್ನಾಟಕ ಸರ್ಕಾರ ಎಂದು ಎಂಟ್ರಿ ಮಾಡಿದ್ದಾರೆ. ಆದ್ದರಿಂದ ಇದರಷ್ಟು ಘೋರವಾದ ಕೆಲಸ ಬೇರೆ ಇಲ್ಲ. ಇದನ್ನು ನಾನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಕರ್ನಾಟಕ ಸರ್ಕಾರ ಎಂದು ರೆಕಾರ್ಡಿನಲ್ಲಿ ನಮೂದು ಮಾಡಿದ್ದಾರೆ. ಇದರಿಂದಾಗಿ ರೈತರಿಗೆ ಒಂದು ಪೈಸೆಯೂ ಹೊಸ ಸಾಲ ಸಿಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸಾಲ ವಸೂಲಾತಿ, ಈ ರೀತಿಯಲ್ಲಿ ದೌರ್ಜನ್ಯ ಮತ್ತು ರೈತರ ಮಾಲಕೀಹಕ್ಕನ್ನು ಕಡಿಮೆ ಮಾಡುವಂಥ ಕೆಲಸ, ಈ ದುಷ್ಕೃತ್ಯವನ್ನು ಮಾಡುತ್ತಿದ್ದಾರೆ ಎಂದರೆ ಇದನ್ನು ರೈತ ಕ್ಷಮಿಸಲಾರ. ಅವನು ಈ ಸರ್ಕಾರದ ಮೇಲೆ ಶಾಪವನ್ನು ಹಾಕುತ್ತಿದ್ದಾನೆ. ಅದಕ್ಕಾಗಿ ನಾನು ಮತ್ತೊಮ್ಮೆ ತಮ್ಮ ಮೂಲಕ ರಾಜ್ಯಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇವತ್ತು ನಾವೇನು ಬೇಡಿಕೆಗಳನ್ನು ಇಟ್ಟಿದ್ದೇವೆ ಅದರಲ್ಲಿ ಯಾವುದೂ ಅನ್ಯಾಯ ಮಾಡುವಂಥಾದ್ದು ಆಗಲಿ, ಸರ್ಕಾರಕ್ಕೆ ನಿಭಾಯಿಸದೇ ಇರುವಂಥಾದ್ದು ಆಗಲಿ, ಸರ್ಕಾರಕ್ಕೆ ಇದರ ಮೇಲೆ ಆರ್ಥಿಕವಾಗಿ ದೊಡ್ಡ ತೊಂದರೆಯಾಗುವಂಥಾದ್ದು ಆಗಲಿ ಯಾವುದೂ ಇಲ್ಲ. ಎಲ್ಲವೂ

ಸರ್ಕಾರ ಈಡೇರಿಸುವುದಕ್ಕೆ ಸಾಧ್ಯವಿರುವಂಥಾದ್ದು ಇದೆ. ಆದ್ದರಿಂದ ಸಾಲ ವಸೂಲಾತಿಯನ್ನು ನಿಲ್ಲಿಸುವುದಕ್ಕೆ ದಯವಿಟ್ಟು ಒಂದು ಆದೇಶವನ್ನು ಸರ್ಕಾರ ಕೊಡಬೇಕು. ಮತ್ತೊಂದು ವಿಚಾರ ನಾನು ಹೇಳುವಂಥಾದ್ದು ಏನೆಂದರೆ ಮೊನ್ನೆ ಆಹಾರ ಸಚಿವರು ಮೆಕ್ಕೆಜೋಳಕ್ಕೆ ಸಂಬಂಧಪಟ್ಟಂತೆ ಎಲ್ಲಾ ಬಿಲ್ಲನ್ನು ಕೊಟ್ಟುಬಿಟ್ಟಿದ್ದೇವೆ, ರೈತರಿಗೆ ಎಲ್ಲಾ ಹಣ ಚುಕ್ತಾ ಮಾಡಿದ್ದೇವೆ ಎಂದು ಹೇಳಿದರು. ನಿನ್ನೆ ನಾನು ಪ್ರತ್ಯಕ್ಷವಾಗಿ ನವಲಗುಂದ, ನರಗುಂದ ತಾಲ್ಲೂಕಿಗೆ ಹೋಗಿಬಂದಿದ್ದೇನೆ. ಅಲ್ಲಿ ಅಳಕವಾಡಿ, ಚಿಕ್ಕನರಗುಂದ ಹಳ್ಳಿಗಳಿಗೆ ಹೋಗಿ ರೈತರನ್ನು ಕೇಳಿದರೆ ಅವರು ಹೇಳುತ್ತಾರೆ "ಏನ್ರಿ, ಸಚಿವರು ನಮಗೆ ಎಲ್ಲಾ ಚುಕ್ತಾ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ನಮಗೆ ಒಂದು ಫೈಸೆ ಬಂದಿಲ್ಲ." ಎಂದು. ಹಾಗಾದರೆ ಯಾವತ್ತು ರೈತರಿಗೆ ಹಣ ಬಿಡುಗಡೆ ಮಾಡಿದ್ದೀರಿ? ಅದು ಯಾವಾಗ ರೈತರಿಗೆ ಹೋಗುತ್ತದೆ? ಇದನ್ನು ಸ್ಪಷ್ಟ ಮಾಡಬೇಕು. ಮೆಕ್ಕೆಜೋಳದ ಹಣ ಇವತ್ತು ರೈತರಿಗೆ ಕೊಟ್ಟಿಲ್ಲ. ಹಾಗಾದರೆ ಇಲ್ಲಿ ಸದನದಲ್ಲಿ ಸುಳ್ಳು ಮಾಹಿತಿಯನ್ನು ಕೊಡುವಂಥಾದ್ದು, ಅಲ್ಲಿ ರೈತರಿಗೆ ಏನೂ ಹಣ ಮುಟ್ಟದೆ ಇರುವಂಥಾದ್ದು ಇದೆಲ್ಲಾ ಏನಾಗಿದೆ? ನಿಮಗೆ ರೈತರಿಗೆ ಮೆಕ್ಕೆಜೋಳದ ಹಣ ಕೊಡುವುದಕ್ಕೆ ಆಗದೇ ಇದ್ದರೆ ನೀವು ಮತ್ತೆ ರೈತರಿಂದ ಸಾಲ ವಸೂಲಾತಿ ಮಾಡುವುದಕ್ಕೆ ನೈತಿಕ ಹಕ್ಕು ನಿಮಗೆಲ್ಲಿದೆ ಎಂದು ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ. ಅದಕ್ಕಾಗಿ ಮಾನ್ಯ ಅಧ್ಯಕ್ಷರೇ, ಇವತ್ತು ಈ ವಿಚಾರದಲ್ಲಿ ರೈತರು ಸಂಕಷ್ಟಕ್ಕೆ ಸಿಕ್ಕಿರುವಂಥ ಸಂದರ್ಭದಲ್ಲಿ ನಾವು ರೈತರ ಪರವಾಗಿ ಧರಣಿ ಕೂರಬೇಕಾಗಿದೆ. ನಮಗೆ ಇಲ್ಲಿ ಸದನವನ್ನು ನಡೆಸಬೇಕು ಎಂದು ಆಸೆ ಇದೆ. ಬೇರೆ ಬೇರೆ ವಿಷಯಗಳನ್ನು ಹೇಳಿ ಮಾತನಾಡುವವರಿದ್ದಾರೆ. ಆದರೆ ಇವತ್ತು ಸದನ ಸ್ಪಂದನ ಮಾಡದೇ ಇದ್ದರೆ ಬಹುಶಃ ಈ ರಾಜ್ಯ ಮತ್ತು ಸರ್ಕಾರ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತಿದ್ದೇನೆ. ದಯವಿಟ್ಟು ಮುಖ್ಯಮಂತ್ರಿಗಳು ಸದನಕ್ಕೆ ಬಂದು ಇದಕ್ಕೆ ಏನಾದರೂ ಒಂದು ಕ್ರಮ ತೆಗೆದುಕೊಂಡು, ರೈತರಿಗೆ ಪರಿಹಾರ ಮಾಡುವಂಥಾದ್ದು ಮತ್ತು ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಸ್ಪಂದನ ಮಾಡುತ್ತಾರೆ ಎಂದು ಆತ್ಮವಿಶ್ವಾಸ ನನಗೆ ಇದೆ. ಆದ್ದರಿಂದ ದಯಮಾಡಿ ಸರ್ಕಾರ ಸ್ಪಂದನ ಮಾಡಲಿ ಎಂದು ಮತ್ತೊಮ್ಮೆ ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತಿದ್ದೇನೆ ಮತ್ತು ನಾವು ಧರಣಿಯನ್ನು ಮುಂದುವರೆಸುತ್ತೇವೆ.

ಅಧ್ಯಕ್ಷರು :— ನನ್ನ ಪರಿಸ್ಥಿತಿ ಏನಾಗಿದೆ ಎಂದರೆ ನೀವು ಹೇಳುವುದು ಎಲ್ಲಾ ಹೇಳಿದ್ದೀರಿ ಮತ್ತು ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಎರಡೂ ಕಡೆಯವರು ಈ ರೀತಿ ಪಟ್ಟು ಹಿಡಿದುಕೊಂಡರೆ ನಾನು ಸಭೆಯನ್ನು ನಡೆಸುವುದಾದರೂ ಹೇಗೆ? ಈಗಾಗ ನೀವು ನ್ಯಾಯವಾಗಿ ಏನು ಕೆಲಸ ಮಾಡಬೇಕೋ ಅದನ್ನು ಮಾಡಿದ್ದೀರಿ. ಅವರೂ ಕೂಡ ಉತ್ತರ ಹೇಳಿದ್ದಾರಲ್ಲಾ ಅವರಿಗೆ ಸ್ವಲ್ಪ ಸಮಯ ಕೊಡಿ, ಯೋಚನೆ ಮಾಡುವುದಕ್ಕೆ ಸಮಯ ಕೊಡಿ. ಒಂದೇಸಾರಿ ಈ ರೀತಿ ಪಟ್ಟು ಹಿಡಿದರೆ ಸರ್ಕಾರದವರು ಏನು ಮಾಡುವುದಕ್ಕೆ ಆಗುತ್ತದೆ?

(ಗೊಂದಲ)

ಶ್ರೀ ಜಗದೀಶ ಶೆಟ್ಟರ್ :— ಜನರು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೆ ಸಾಕಷ್ಟು ಪರಿತಪಿಸುತ್ತಿದ್ದಾರೆ. ಕೆರೆಗಳು ಭತ್ತಿಹೋಗಿವೆ. ಯಾರು ಜಿಲ್ಲಾಧಿಕಾರಿಗಳು ಇರಬಹುದು, ಸಂಬಂಧಪಟ್ಟ ಅಧಿಕಾರಿಗಳು ಇರಬಹುದು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಆಗುತ್ತಿಲ್ಲ. ಯಾವ ಬರಗಾಲ ಕಾಮಗಾರಿಯೂ ಪ್ರಾರಂಭವಾಗಿಲ್ಲ. ದನಕರುಗಳು ಕಸಾಯಿಖಾನೆಗೆ ಹೋಗುತ್ತಿವೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಸನ್ಮಾನ್ಯ ಅಧ್ಯಕ್ಷರೇ, ನಾವು ಕಳೆದ ಸೋಮವಾರ ಅಧಿವೇಶನ ಪ್ರಾರಂಭವಾದ ಮೇಲೆ ಸುಮಾರು ಒಂದು ವಾರ ಕಾಲ ಈ ಸರ್ಕಾರ ಮೊಂಡುತನವನ್ನು, ಹಠಮಾರಿತನವನ್ನು ಬಿಟ್ಟು ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸರ್ಕಾರ ಸಿದ್ಧತೆಗಳನ್ನು ಮಾಡಬೇಕೆಂದು ಹೇಳಿ ಬಹಳಷ್ಟು ಒತ್ತಾಯವನ್ನು ಭಾಷಣಗಳ ಮೂಲಕ ಆಡಳಿತ ಪಕ್ಷದವರೂ ಸೇರಿ ನಾವೆಲ್ಲರೂ ಸಹಿತ ಪ್ರಾಮಾಣಿಕವಾಗಿ ಈ ಬರಗಾಲದ ಗಂಭೀರತೆ ಬಗ್ಗೆ ಮಾತನಾಡಿದ್ದೇವೆ. ದುರ್ದೈವದಿಂದ ಸರ್ಕಾರ ಕಾಗದದ ಮೇಲೆ ಹದಿನೈದು ಅಂಶಗಳ ಕಾರ್ಯಕ್ರಮವನ್ನು ಘೋಷಣೆ ಮಾಡುವುದರ ಮೂಲಕ ತೃಪ್ತಿ ಪಡೆದಿದೆಯೇ ವಿನಹ ವಸ್ತುಸ್ಥಿತಿಯಲ್ಲಿ ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಬೇಕಾಗಿರತಕ್ಕಂಥ ಸಿದ್ಧತೆಗಳನ್ನು ಮಾಡುವುದಕ್ಕೆ ವಿಫಲವಾಗಿದೆ. ಈಗ ರಾಜ್ಯದ ಅನೇಕ ಸಮಸ್ಯೆಗಳಿವೆ. ಕಾನೂನು ಪರಿಸ್ಥಿತಿ ಹದಗೆಟ್ಟಿದೆ. ಇದೇರೀತಿ ಮುಂದುವರೆದರೆ ಮುಂದೆ ಬಹಳ ಕೆಟ್ಟ ಪರಿಸ್ಥಿತಿ ಉಂಟಾಗುತ್ತದೆ. ಅದರ ಬಗ್ಗೆ ಕೂಡ ಚರ್ಚೆ ಮಾಡಬೇಕಾಗಿರತಕ್ಕದ್ದು ಇದೆ. ಇವತ್ತು ಇಡೀ ರಾಜ್ಯದಲ್ಲಿ ನುಸಿರೋಗ ಜಾಸ್ತಿಯಾಗಿ ರೈತರು ನಮಗೆ ನೀರಾ ಇಳಿಸಲಿಕ್ಕೆ ಅವಕಾಶಮಾಡಿ ಕೊಡಬೇಕೆಂದು ಕೇಳುತ್ತಿದ್ದಾರೆ. ಮತ್ತು ಸುಮಾರು 16 ಸಾವಿರ ಕೋಟಿ ರೂಪಾಯಿಗಳ ಬಜೆಟ್‌ಗೆ ನಾವು ಮಂಜೂರಾತಿಯನ್ನು ಕೊಡಲಿಕ್ಕೆ ಆದಷ್ಟು ಚರ್ಚೆಯನ್ನು ಎಷ್ಟು ಸಾಧ್ಯವೋ ಅಷ್ಟು ಮಾಡಬೇಕು ಎನ್ನುವ ಪ್ರಜ್ಞೆ ಎಲ್ಲರಿಗಿಂತ ಹೆಚ್ಚಾಗಿ ನಮಗೂ ಸಹಿತ ಇದೆ. ಆದರೆ, ದುರ್ದೈವದಿಂದ ಕನಿಷ್ಟ ಬೇಡಿಕೆಗಳನ್ನು ಈ ಸರ್ಕಾರ ಒಪ್ಪಿಲ್ಲ. ನಾನು ಅಂದುಕೊಂಡಿದ್ದೆ, ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷದ ಇತರೆ ಸದಸ್ಯರುಗಳು ಮತ್ತು ಆಡಳಿತ ಪಕ್ಷದ ಸದಸ್ಯರುಗಳು ಇವರ ರೋಧನೆಗೆ ಸ್ಪಂದಿಸಿ ಕಿಂಚಿತ್ತಾದರೂ ಸಹಾಯ ಮಾಡುತ್ತಾರೆಂದು ಭಾವಿಸಿದ್ದೆ. ನಾವೂ ಸಹಿತ ಮೊನ್ನೆ, ಎರಡು ದಿನಗಳು ರಜಾ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡಿದ್ದೇವೆ. ಜಿಲ್ಲಾ ಪಂಚಾಯ್ತಿಗಳ ಮುಖ್ಯ ಕಾರ್ಯದರ್ಶಿಗಳಿಗೆ ಸಂಪರ್ಕ ಮಾಡಿದ್ದೇವೆ. ಏನಾದರೂ ಹಣ ಬಿಡುಗಡೆಯಾಗಿದೆಯೇ ಎಂಬ ಮಾತನ್ನು ಕೇಳಿದರೆ, ಸ್ವಾಮಿ ನಾವೇನು ಮಾಡೋಣ, ನಮ್ಮ ಹತ್ತಿರ ದುಡ್ಡೇ ಇಲ್ಲ, ಯಾವರೀತಿ ಬೋರ್‌ವೆಲ್‌ನ್ನು ತೋಡಿಸುವುದು?

ಯಾವರೀತಿ ಬೋರ್‌ವೆಲ್‌ನ್ನು ಆಳ ಮಾಡತಕ್ಕಂಥಾದ್ದು, ಯಾವರೀತಿ ನಾವು ಕರೆಂಟ್ ಕನೆಕ್ಷನ್ ಕೊಡತಕ್ಕಂಥಾದ್ದು ನಮಗೇನೂ ಆದೇಶ ಇಲ್ಲವೆಂಬ ಮಾತನ್ನು ಒಂದು ಕಡೆ ಹೇಳುತ್ತಿದ್ದಾರೆ. ತಾವು ರೈಲ್ವೆ ಡಿಪಾರ್ಟ್‌ಮೆಂಟಿನಿಂದ ಮಾಹಿತಿಯನ್ನು ತರಿಸಿಕೊಳ್ಳಿ. ಇವತ್ತು ಹುಬ್ಬಳ್ಳಿ, ಗುಲ್ಬರ್ಗಾ ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ, ಕಳೆದ ಎಂಟು ದಿನಗಳಿಂದ, ಎಲ್ಲಿ ಕೂಲಿ ಸಿಗುವುದಿಲ್ಲವೋ ಎಂದು ಮುಂಚಿತವಾಗಿಯೇ ಅಡ್ವಾನ್ಸ್ ಬುಕಿಂಗ್ ಮಾಡಿಕೊಂಡು ವಲಸೆ ಹೋಗುತ್ತಿದ್ದಾರೆ. ಇವತ್ತು ಸರ್ಕಾರ ಅವರಿಗೆ ಒಂದು ಭರವಸೆ ಕೊಡತಕ್ಕಂತಾದ್ದರಲ್ಲಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದರಲ್ಲಿ ಈಗ ಮಾಡಬೇಡಿ, ಎಂದು ಹೇಳಿದ್ದೇವೆ. ಆದರೆ, ಪೋಲೀಸರನ್ನು ಕಳುಹಿಸಿ, ಬಡ್ಡಿಯನ್ನು ವಸೂಲಾತಿ ಮಾಡುವುದರ ಜೊತೆಗೆ, ಸಾಲ ವಸೂಲಿ ಮಾಡುವುದಕ್ಕೆ ಅವರಿಗೆ ಜಪ್ತಿ ಮಾಡುವ ಕೆಲಸವನ್ನು ಇವರು ಮಾಡುತ್ತಾರೆ. ಅದನ್ನು ಒಂದು ವರ್ಷ ಮುಂದೆ ಹಾಕಿ. ಜಪ್ತಿ ಮಾಡಬೇಡಿ ಎಂಬ ಬೇಡಿಕೆಯನ್ನು ನಾವಿಟ್ಟಿದ್ದೇವೆ. ಆಮೇಲೆ ಬಡ್ಡಿವಸೂಲಾತಿ ಬಗ್ಗೆ ಮತ್ತು ಮನ್ನಾ ಮಾಡುವುದರ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದರು. ಇವೆಲ್ಲಾ ಬುಕ್ ಅಡ್ಜೆಸ್ಟ್‌ಮೆಂಟ್ ಇದನ್ನು ನಾವು ಕೇಳಿದರೆ, ನಿಮ್ಮ ಕಾಲದಲ್ಲೂ ಹಾಗೆಯೇ ಆಗಿದ್ದು ಎಂಬ ಉತ್ತರವನ್ನು ಕೊಡುತ್ತಾರೆ. ಅದು ಯಾವ ಕಾಲದಲ್ಲಾದರೂ ಆಗಿರಲಿ, ಅದು ತಪ್ಪೇ. ನಿಜವಾಗಿಯೂ ವಸೂಲಿಯಾಗಿರತಕ್ಕಂಥಾದ್ದು 20 ರಿಂದ 22 ಪರ್ಸೆಂಟ್ ಅಷ್ಟೆ. ನಾವು ಇನ್ನೂ ಒತ್ತಾಯ ಮಾಡುತ್ತಿದ್ದರೆ, ನಬಾರ್ಡ್‌ನವರು ಒಪ್ಪುತ್ತಾರೆ. ಅವರು ಏಕೆ ಒಪ್ಪುವುದಿಲ್ಲ. ಅವರು ಒಪ್ಪಿಯೇ ಒಪ್ಪುತ್ತಾರೆ. ಈ ಪರಿಸ್ಥಿತಿ ಇದೆಯೆಂದು ನಾವು ಅವರಿಗೆ ತಿಳುವಳಿಕೆಯನ್ನು ಕೊಡಬೇಕಾಗುತ್ತದೆ. ಅದಕ್ಕೆ ಮಾನ್ಯ ಸರ್ಕಾರದವರು ಈಗಲಾದರೂ ಸಹಿತ ಈ ಬಡ್ಡಿಯನ್ನು ವಸೂಲಿ ಮಾಡುವುದನ್ನು ಸಾಲ ವಸೂಲಿ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಹೇಳುತ್ತಿದ್ದೇವೆ. ಆಮೇಲೆ ಪಂಪುಸೆಟ್ ಕನೆಕ್ಷನ್ ವಿಚಾರ. ಡಿಸ್-ಕನೆಕ್ಷನ್ ಡ್ರೈವ್ ಬಗ್ಗೆ ನಾವಿದ್ದಾಗಲೂ ಹೇಳಿದ್ದೇವೆ. ಅದನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದಾರೆ. 4 ವರ್ಷದ್ದು, 5 ವರ್ಷದ್ದೂ ಬಾಕಿಯನ್ನು ಒಂದೇಸಾರಿ ಕೊಡಿ ಎಂದು ಹೇಳಿದರೆ, ಯಾವ ರೀತಿ ಅವರು ಕಟ್ಟುವುದಕ್ಕೆ ಸಾಧ್ಯ ಇದೆ? ಅವರು ಕಟ್ಟಲಿಕ್ಕೆ ಸಾಧ್ಯವೇ ಇಲ್ಲ. ಅವರು ಕಟ್ಟಬೇಕು, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ, ಇವರು ಡಿಸ್‌ಕನೆಕ್ಷನ್ ಡ್ರೈವನ್ನು ಪ್ರಾರಂಭ ಮಾಡಿದ್ದಾರೆ. ಎಲ್ಲಾ ಕಡೆಗಳಲ್ಲೂ ಆ ಪಡೆಗಳು ಬಹಳ ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ನಾವು ಕೇಳುತ್ತಲೇ ಇದ್ದೇವೆ. ಡಿಸ್-ಕನೆಕ್ಷನ್ ಡ್ರೈವನ್ನು ನಿಲ್ಲಿಸಿಲ್ಲ. ಮತ್ತೆ ಡಾರ್ಕ್ ಏರಿಯಾ ಮತ್ತು ಗ್ರೇ ಏರಿಯಾ ಬಗ್ಗೆ ಶ್ರೀಮಾನ್ ಭೈರೇಗೌಡರು ವಿಶೇಷವಾಗಿ ಈ ಸದನದಲ್ಲಿ ಪ್ರಸ್ತಾಪ ಮಾಡಿದರು. 75 ತಾಲ್ಲೂಕುಗಳಲ್ಲಿ ಈ ತೊಂದರೆ ಇದೆ. ಮುಳಬಾಗಿಲಿನಲ್ಲಿ ಐದು ಕಡೆ ಬೋರ್‌ವೆಲ್‌ಗಳಲ್ಲಿ ನೀರು ಬಿದ್ದಿದೆ ಎಂದು ಹೇಳಿದಿರಿ. ಇವರಿಗೆ, ಅವಕಾಶ ಕೊಡುವುದಕ್ಕೆ ತೊಂದರೆ ಏನು? ಯಾರು

ಕೇಳುವುದಕ್ಕೆ ಹೋಗುತ್ತಾರೆ? ಕೇಂದ್ರ ಸರ್ಕಾರದವರು ನಿಮ್ಮ ಮೇಲೆ ದಾಳಿ ಮಾಡುತ್ತಾರೆಯೇ? ದಂಡು ಕಳುಹಿಸುತ್ತಾರೆಯೇ? ಯುದ್ಧ ಮಾಡುತ್ತಾರೆಯೇ? ಕನೆಕ್ಷನ್ ಕೊಡುವುದಕ್ಕೆ ನಿಮಗೆ ಏನು ತೊಂದರೆ? ಅದನ್ನಾದರೂ ಸಭೆಗೆ ಹೇಳಿ.

ಶ್ರೀ ಸಿ. ಭೈರೇಗೌಡ (ವೇಮಗಲ್) :— ಡಾರ್ಕ್ ಏರಿಯಾ, ಗ್ರೇ ಏರಿಯಾ ಬಗ್ಗೆ ನಾನು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಇವರು ಬೇರೆಯವರ ಕಡೆ ಬೆರಳನ್ನು ತೋರಿಸುತ್ತಿದ್ದಾರೆ. ಅದು ಸುಳ್ಳು. ಇವರೇ ಮಾಡಿರತಕ್ಕೂಥಾದ್ದು. ಡಾರ್ಕ್ ಏರಿಯಾದಲ್ಲಿ ಎನರ್‌ಜೈಜ್ ಮಾಡಕೂಡದು ಎಂದು ಕೆಪಿಟಿಸಿಎಲ್‌ಗೆ ನಿರ್ದೇಶನ ಕೊಟ್ಟಿರುವುದು ರಾಜ್ಯ ಸರ್ಕಾರ. ಈ ರೀತಿ ಕೊಟ್ಟಿರುವ ನಿರ್ದೇಶನಕ್ಕೂ ಮತ್ತು ಕೇಂದ್ರ ಸರ್ಕಾರ ಅಥವಾ ನಬಾರ್ಡ್‌ಗೂ ಸಂಬಂಧ ಇಲ್ಲ. ಇದೇನಿದ್ದರೂ ರಾಜ್ಯ ಸರ್ಕಾರದ್ದೇ ತೀರ್ಮಾನ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೇ, ಇವರೇನು ಮಾಡಿದ್ದಾರೆಂದರೆ, ರಾಜ್ಯಸಭಾ ಮತ್ತು ಲೋಕಸಭಾ ಸದಸ್ಯರನ್ನು ಕರೆಸಿ ಒಂದು ಸಭೆ ಮಾಡಿ, ಆ ಸುಳ್ಳು ಅಂಕಿಅಂಶಗಳು ಮತ್ತು ತಪ್ಪು ದಾರಿಗೆ ಎಳೆಯತಕ್ಕ ಮೆಮೋರ್ಯಾಂಡಮ್ ಏನಿದೆ, ಅದನ್ನು ಅವರಿಗೂ ಸಹಿತ ಕಳುಹಿಸಿ, ಇದನ್ನು ನೀವು ಲೋಕಸಭೆಯಲ್ಲಿ ಪ್ರಸ್ತಾಪ ಮಾಡಿ ಎಂದು ಕೇಳಿದ್ದಾರೆ. ಅದನ್ನು ಬಿಟ್ಟರೆ, ಹಣಕಾಸನ್ನು ಬಿಡುಗಡೆ ಮಾಡುವು ದೃಷ್ಟಿಯಿಂದ ಗ್ರಾಮೀಣ ಅಭಿವೃದ್ಧಿ ಸಚಿವರಾಗಲೀ, ಕಂದಾಯ ಸಚಿವರಾಗಲೀ, ಮುಖ್ಯಮಂತ್ರಿಗಳಾಗಲೀ ಇವತ್ತು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ? ಕುಡಿಯುವ ನೀರಿಗೆ ಇವತ್ತು ರೈತರು ಶಾಪ ಹಾಕುತ್ತಾ ಇದ್ದಾರೆ. ಪಟ್ಟಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ. ಅದರ ಬಗ್ಗೆ ಏನೂ ಸಹಿತ ಇವರು ತಯಾರಿಯನ್ನು ಮಾಡುವುದಕ್ಕೆ ಸಿದ್ಧರಿಲ್ಲ. ಹಣವನ್ನು ಬಿಡುಗಡೆ ಮಾಡುವುದಕ್ಕೆ ತಯಾರಿಲ್ಲ. ಅದಕ್ಕೋಸ್ಕರ ನಾವು ಹೇಳಿದೆವು, ಕೊನೇಪಕ್ಷ ಒಂದು ತಿಂಗಳಿಗೋಸ್ಕರ ಒಂದು ನೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಎಂದು ಹೇಳಿದೆವು. ಇವೆಲ್ಲಾ ಯಾವುದೂ ಸಹಿತ ಒಪ್ಪದೇ, ಬರೀ ಅಡಿಷನಲ್ ಚೀಫ್ ಸೆಕ್ರೆಟರಿ, ಚೀಫ್ ಸೆಕ್ರೆಟರಿ ಪ್ರತಿದಿನ ಮೀಟ್ ಮಾಡುತ್ತಾರೆ. Even otherwise, they meet and find out what is happening. ಎರಡನೆಯದಾಗಿ ಡೆಪ್ಯುಟಿ ಕಮೀಷನರ್ ಅದರ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಡೆಪ್ಯುಟಿ ಕಮೀಷನರ್‌ಗಳು ಇಲ್ಲದೆ ಇನ್ನಾರು ಇರುತ್ತಾರೆ. ಇದು ಎರಡನೇ ಅಂಶ. ಈ ಅಂಶಗಳಿಗೆ ಏನಾದರೂ ಅರ್ಥ ಇದೆಯೇ? ರೈತರು ಶಾಪ ಹಾಕುತ್ತಿದ್ದಾರೆ, ನಾವೆಲ್ಲಾ ಒತ್ತಾಯ ಮಾಡಿದ ಮೇಲೆ, ಆಡಳಿತ ಪಕ್ಷಕ್ಕೆ ಕೆಟ್ಟ ಹೆಸರು ಬಂದಿದೆ ಎಂಬುವ ಒಂದೇ ಕಾರಣಕ್ಕೋಸ್ಕರ ತತ್ಕಾಲ ಯೋಜನೆ ಕೈಬಿಡುವುದನ್ನು ಬಿಟ್ಟರೆ, ಬೇರೆ ಯಾವುದೂ ಆಗಿಲ್ಲ. ನಾವು ಕಳೆದ ಒಂದು ವಾರದಿಂದ ಅರಣ್ಯರೋಧನ ಮಾಡಿದ್ದಕ್ಕೆ

ಈ ಸರ್ಕಾರ ರೈತರಿಗೆ ಸ್ಪಂದಿಸಿರುವುದು ಇಷ್ಟು ಮಾತ್ರ. ನಾವು ಈ ಸದನದ ವೇಳೆಯನ್ನು ಹಾಳು ಮಾಡಬಾರದು ಎಂಬುದು ನಮಗೆ ಗೊತ್ತಿದೆ. ತಾವು ಹೊಸ ಸದಸ್ಯರಿಗೆ ಅವಕಾಶ ಕೊಡಬೇಕು ಎಂದು ಹೇಳುತ್ತೀರಿ. ಹೊಸ ಸದಸ್ಯರು ಮತ್ತು ಎಲ್ಲರೂ ಸೇರಿಯೇ ನಮ್ಮನ್ನು ಇಲ್ಲಿ ನಾಯಕರು ಎಂದು ಮಾಡಿರತಕ್ಕಂತಾದ್ದು. ರಾಜ್ಯದ ಸಮಸ್ಯೆಗಳನ್ನು ನಾವು ತಿಳಿಸಬೇಕಾಗುತ್ತದೆ. ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಜನವಾಹಿನಿಯಲ್ಲಿ ಉತ್ತರ ಕರ್ನಾಟಕದಲ್ಲಿ ಯಾವರೀತಿಯ ಭಯಂಕರವಾದ ಪರಿಸ್ಥಿತಿ ಬಂದಿದೆ, ಕಸಾಯಿಖಾನೆಗಳಿಗೆ ದನಗಳನ್ನು ಕಳುಹಿಸುತ್ತಿದ್ದಾರೆ ಎಂಬುದು ಗೊತ್ತಿದ್ದರೂ ಸಹಿತ ಸರ್ಕಾರ ಸುಮ್ಮನೆ ಇದ್ದಾಗ, ನಾವು ಚಟ ತೀರಿಸಿಕೊಳ್ಳುವುದಕ್ಕೆ ಮಾತನಾಡಬೇಕೇ, ಅಧ್ಯಕ್ಷರೇ? ತಾವು ದಯವಿಟ್ಟು ಈ ಸರ್ಕಾರಕ್ಕೆ ಕಿವಿ ಹಿಂಡಿ ಹೇಳಿ. ಬದಲಾವಣೆ ಮಾಡಿಕೊಳ್ಳಿ, ಹಣ ಬಿಡುಗಡೆ ಮಾಡಿ, ಕುಡಿಯುವ ನೀರಿಗೆ, ಕೂಲಿ ಕೆಲಸಕ್ಕೆ ಅವಕಾಶ ಮಾಡಿಕೊಡಿ ಎಂದು ನಾವು ಧರಣಿ ಮಾಡಿದ್ದೇವೆ. ನಿಮ್ಮ ಜೊತೆಯಲ್ಲಿ ನಾವು ಸಹಕಾರ ಮಾಡುತ್ತೇವೆ.

ಅಧ್ಯಕ್ಷರು :— ಕಿವಿ ಹಿಂಡಬೇಕು ಎಂದು ರೂಲ್ಸ್‌ನಲ್ಲಿ ಎಲ್ಲಿಯೂ ಹಾಕಿಲ್ಲವಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಕಿವಿ ಹಿಂಡುವುದು ಎಂದರೆ, ಸರ್ಕಾರಕ್ಕೆ ಹೇಳುವುದು ಎಂದು ಅರ್ಥ.

ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) :— ಸನ್ಮಾನ್ಯ ಅಧ್ಯಕ್ಷರೇ, ನಾವು ಈ ವಾರದಲ್ಲಿ ತಮ್ಮ ಮುಖಾಂತರ ಸರ್ಕಾರದಲ್ಲಿ ಪರಿಪರಿಯಾಗಿ ವಿನಂತಿ ಮಾಡಿಕೊಂಡಿದ್ದೇವೆ. ಪ್ರತಿ ವರ್ಷ ಮಳೆ ಬರುತ್ತೆ ಎಂಬುದು ನ್ಯಾಚುರಲ್ಲಾಗಿ ಬರುವಂಥ ವಿಚಾರ. ಆದರೆ, ಸುಮಾರು ಕಳೆದ 8 ತಿಂಗಳಿಂದ ಒಂದು ಹನಿ ಮಳೆ ಬೀಳದೇ ಇದ್ದರೂ ಸುಮ್ಮನೇ ಇರುವುದಕ್ಕಾಗುತ್ತದೆಯೇ? ರೈತರು ಒಂದು ಹಿಡಿ ಬಿತ್ತನೆಯನ್ನು ಬಿತ್ತಿಲ್ಲ. ಇದು ತಮಗೂ ಗೊತ್ತಿರುವ ವಿಚಾರ. ಹೊಲಗಳನ್ನು ಉತ್ತಿಲ್ಲ. ಇವತ್ತು ಸೊಸೈಟಿ ಸಾಲ ಆಗಬಹುದು ಪಿಎಲ್ ಡಿ ಸಾಲ ಆಗಬಹುದು ವಸೂಲಿ ಮಾಡುತ್ತಿದ್ದಾರೆ ಅವರ ಮನೆಯಲ್ಲಿರತಕ್ಕ ಟಿವಿ ಆಗಬಹುದು, ಪಾತ್ರೆ, ಚೆಂಬು ಇತ್ಯಾದಿಗಳನ್ನು ಜಪ್ತಿ ಮಾಡಿ ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ನಾನು ತುಮಕೂರು ಜಿಲ್ಲೆಗೆ ಹೋದಾಗ, ಬ್ಯಾಂಕಿನ ಸಾಲಗಳನ್ನು ರೈತರಿಂದ ವಸೂಲಿ ಮಾಡುತ್ತಿದ್ದುದನ್ನು ನೋಡಿದ್ದೇನೆ. ಆದ್ದರಿಂದ, ಈ ಸಾಲ ವಸೂಲಿಯನ್ನು ಸರ್ಕಾರ ಕೂಡಲೇ ನಿಲ್ಲಿಸಬೇಕು. ಬಡ್ಡಿಯನ್ನು ಮನ್ನಾ ಮಾಡಬೇಕು. ಹಿಂದೆ ನಮ್ಮ ಸರ್ಕಾರ ಏನು 240 ಕೋಟಿ ರೂ.ಗಳನ್ನು ಮನ್ನಾ ಮಾಡಿತ್ತು, ಆ ಪ್ರಕಾರ ಈ ಸರ್ಕಾರವೂ ಕೂಡ ರೈತರಿಗೆ ಬಡ್ಡಿಯನ್ನು ಮನ್ನಾ ಮಾಡಬೇಕು. ಸಾಲಗಳನ್ನು ಮನ್ನಾ ಮಾಡಬೇಕು, ಕೆಇಬಿ ವಸೂಲಿಯನ್ನು ನಿಲ್ಲಿಸಬೇಕು. ಮತ್ತು ಕೆಇಬಿನವರು ಇವತ್ತು ಏನು ವಿದ್ಯುತ್ ಕಟ್ ಮಾಡುತ್ತಿದ್ದಾರೆ, ಪುಲಿಕೇಶಿ ಪಡೆಯವರು

ಏನು ಕಟ್ ಮಾಡುತ್ತಿದ್ದಾರೆ, ಅದನ್ನು ಕೂಡಲೇ ನಿಲ್ಲಿಸಿ ರೈತರಿಗೆ ಅನುಕೂಲ ಮಾಡಬೇಕೆಂದು ಮತ್ತೊಮ್ಮೆ ಕೇಳುತ್ತೇನೆ. ಈ ಸರ್ಕಾರ ಇದನ್ನು ಮಾಡುವವರೆಗೂ ನಾವು ಧರಣಿ ಮಾಡಿಯೇ ಮಾಡುತ್ತೇವೆ.

(ಗೊಂದಲ)

ಶ್ರೀ ಸಿ. ಭೈರೇಗೌಡ :— ಮಾನ್ಯ ಅಧ್ಯಕ್ಷರೇ, ಮಾನ್ಯ ನಾಯಕರಾದ ಸಿಂಧ್ಯಾರವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಕುಡಿಯುವ ನೀರಿನ ವಿಚಾರವೊಂದನ್ನು ಮಾತ್ರ ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ನಿನ್ನೆ, ಮೊನ್ನೆ ದಿವಸ ವಿವರಗಳನ್ನು ಸಂಗ್ರಹ ಮಾಡಿಕೊಂಡು ಬಂದಿದ್ದೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯ್ತಿಯ ಎರಡು ವಿಭಾಗಗಳು ಇವೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ. ಒಂದು ವಿಭಾಗದ ವಿವರಗಳು ನನ್ನ ಹತ್ತಿರ ಇವೆ. ಕೋಲಾರ ತಾಲ್ಲೂಕಿನಲ್ಲಿ 107 ಹಳ್ಳಿಗಳಲ್ಲಿ ಇವತ್ತು ಕುಡಿಯುವ ನೀರಿನ ತೊಂದರೆ ಇದೆ. ಇವರು ಇಲ್ಲಿಯವರೆಗೂ 25 ಹಳ್ಳಿಗಳಿಗೆ ಮಾತ್ರ ನೀರನ್ನು ಕೊಡತಕ್ಕ ಕೆಲಸವನ್ನು ಕೈಗೊಂಡಿದ್ದಾರೆ. ಬಂಗಾರುಪೇಟೆ ತಾಲ್ಲೂಕಿನಲ್ಲಿ 89 ಹಳ್ಳಿಗಳಲ್ಲಿ ಕೇವಲ 27 ಹಳ್ಳಿಗಳಲ್ಲಿ ಮಾತ್ರ ಕ್ರಮ ತೆಗೆದುಕೊಂಡಿದ್ದಾರೆ. ಮಾಲೂರು ತಾಲ್ಲೂಕಿನಲ್ಲಿ 61ಕ್ಕೆ 11 ಹಳ್ಳಿಗಳಲ್ಲಿ ಮಾತ್ರ ತೆಗೆದುಕೊಂಡಿದ್ದಾರೆ. ತಮ್ಮ ತಾಲ್ಲೂಕು ಮುಳಬಾಗಿಲು ಕ್ಷೇತ್ರದಲ್ಲಿ 82ಕ್ಕೆ ಕೇವಲ 27 ಮಾತ್ರ. ಎನೂ ಮಾಡಿಲ್ಲ. ಒಟ್ಟಿಗೆ ಒಂದು ಡಿವಿಜನ್‌ನಲ್ಲಿ 435 ಗ್ರಾಮಗಳಲ್ಲಿ 108 ಗ್ರಾಮಗಳಲ್ಲಿ ಮಾತ್ರ ಕ್ರಮ ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು :— ಬೋರ್‌ವೆಲ್‌ಗಳು ಹೋಗಬೇಕು. ಮೆಷಿನ್ಸ್ ಹೋಗಬೇಕು. ನೀರು ಬರಬೇಕು. ಮ್ಯಾಜಿಕ್ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಸಿ. ಭೈರೇಗೌಡ :— ಹಣ ಕೇಳಿರತಕ್ಕಂಥಾದ್ದು 9.71 ಕೋಟಿ ರೂ.ಗಳು ಇವರು ಬಿಡುಗಡೆ ಮಾಡಿರತಕ್ಕಂಥಾದ್ದು ಒಂದೂವರೆ ಕೋಟಿ ರೂ.ಗಳು. ಇದರಿಂದ ಜನ ಎಲ್ಲಿಗೆ ಹೋಗಬೇಕು? ಕುಡಿಯುವ ನೀರು ಕೊಡುವುದಕ್ಕೆ ಯೋಗ್ಯತೆ ಇಲ್ಲದೆ ಇರತಕ್ಕಂಥ ಸರ್ಕಾರ ಏಕೆ ಇರಬೇಕು?

(ಗೊಂದಲ)

ಅಧ್ಯಕ್ಷರು :— ಈಗ ಸಭೆಯನ್ನು ನಡೆಸಲು ಬಿಡುತ್ತೀರೋ ಇಲ್ಲವೋ?

(ಗೊಂದಲ)

ಅಧ್ಯಕ್ಷರು :— ಈಗ ಸದನವನ್ನು ಅರ್ಧ ಗಂಟೆ ಮುಂದೂಡುತ್ತಿದ್ದೇನೆ.

(ಸದನವು 11.20 ನಿಮಿಷಕ್ಕೆ ಮುಂದೂಡಲ್ಪಟ್ಟಿತು)

ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ನವರು) ಪೀಠವನ್ನಲಂಕರಿಸಿದ್ದರು.

(ಸದನವು ಮಧ್ಯಾಹ್ನ 12-40ಕ್ಕೆ ಪುನರ್ ಸಮಾವೇಶಗೊಂಡಿತು)

(ಬಿ.ಜೆ.ಪಿ., ಜೆ.ಡಿ (ಯು), ಜೆ.ಡಿ. (ಎಸ್) ಪಕ್ಷಗಳ ಮಾನ್ಯ ಸದಸ್ಯರುಗಳು ಧರಣಿನಿರತರಾಗಿದ್ದಾರು)

ಅಧ್ಯಕ್ಷರು :— ಸರ್ಕಾರದವರು ಮತ್ತು ವಿರೋಧ ಪಕ್ಷದ ನಾಯಕರು ನಮ್ಮ ಕಛೇರಿಯಲ್ಲಿ ಸೇರಿ ಯಾವುದೋ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅದರ ಸ್ಟೇಟ್‌ಮೆಂಟ್‌ನ್ನು ಮಾನ್ಯ ಕಾನೂನು ಸಚಿವರು ಈಗ ಸದನದಲ್ಲಿ ಮಾಡುತ್ತಾರೆ. ಆದುದರಿಂದ ಧರಣಿನಿರತ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರೆ ಒಳ್ಳೆಯದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಮೊದಲು ಸಚಿವರು ಸ್ಟೇಟ್‌ಮೆಂಟ್ ಮಾಡಲಿ.

2. ಮಂತ್ರಿಗಳಿಂದ ಹೇಳಿಕೆ.

ವಿಷಯ: ರೈತರ ಸಾಲದ ಮೇಲಿನ ಬಡ್ಡಿ ಮನ್ನ ಬಗ್ಗೆ ನಡೆದ ಚರ್ಚೆಗೆ ಉತ್ತರ.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಅನೇಕ ಬಾರಿ ನಾವು ಪ್ರತಿಪಕ್ಷಗಳ ನಾಯಕರ ಜೊತೆ ಸಭೆ ನಡೆಸುವ ಬಗ್ಗೆ ಚರ್ಚೆ ಮಾಡಿದ್ದೇವೆ. ಈಗಾಗಲೇ ಬರಗಾಲ ಹೆಚ್ಚಾಗಿರುವ ಭಾಗಗಳಿಂದ ಬರುವ ಶಾಸಕರು ತಮ್ಮ ಪ್ರದೇಶಗಳಲ್ಲಿ ಜನರು ಹೆಚ್ಚು ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ; ಹೀಗಿರುವಾಗ ನಾವು ಇಲ್ಲಿ ಧರಣಿ ನಡೆಯುತ್ತಿರುವುದರಿಂದ ಶಾಸನ ಸಭೆಯಲ್ಲೂ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ, ಆತ್ಮಕಡೆ ನಮ್ಮ ಕ್ಷೇತ್ರಗಳಿಗೆ ಹೋಗುವುದಕ್ಕೆ ಆಗುತ್ತಿಲ್ಲವೆಂದಿದ್ದಾರೆ. ಈ ಬಗ್ಗೆ ಹೆಚ್ಚು ಒತ್ತಡಗಳು ಈಗಾಗಲೇ ಬರತೊಡಗಿವೆ. ಈ ವಿಷಯವನ್ನು ಅಧ್ಯಕ್ಷರಾದ ತಮ್ಮ ಗಮನಕ್ಕೂ ತಂದಿದ್ದೇವೆ. ಇನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಮತ್ತು ಇನ್ನೂ ಅನೇಕ ಹಿರಿಯ ಸದಸ್ಯರುಗಳು ಮಾತನಾಡಿ ಸರ್ಕಾರದವರು ಸದನಕ್ಕೆ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆಂದೂ ಮತ್ತು ಸರ್ಕಾರ ಹಠಮಾರಿತನದ ಧೋರಣೆಯನ್ನು ತಾಳಿದೆಯೆಂದು ಹೇಳಿದ್ದಾರೆ. ಇದಲ್ಲದೆ ರಾಜ್ಯ ಸರ್ಕಾರ ತನ್ನ ಕೆಲಸವನ್ನು ಸರಿಯಾದ ರೀತಿಯಲ್ಲಿ ನಿರ್ವಾಹಣೆ ಮಾಡಿಲ್ಲವೆಂದೂ ಕೂಡ ಅನೇಕ ಆಪಾದನೆಗಳನ್ನು ಮಾಡಿದ್ದಾರೆ. ಆಪಾದನೆ ಮಾಡುವ ಅವರ ಹಕ್ಕಿನ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದಕ್ಕೆ ಅವರು